ತಿಳಿದಿರಲಿ! ಖಂಡಿತವಾಗಿಯೂ ಈ ಪ್ರಪಂಚವು ಶಾಪಗ್ರಸ್ತವಾಗಿದೆ. ಅದರಲ್ಲಿರುವುದೂ ಶಾಪಗ್ರಸ್ತವಾಗಿದೆ. ಅಲ್ಲಾಹನ ಸ್ಮರಣೆ ಮತ್ತು ಅದಕ್ಕೆ ಸಂಬಂಧಿಸಿದವುಗಳು, ಆಲಿಮ್ (ವಿದ್ವಾಂಸ) ಅಥವಾ ಮುತಅಲ್ಲಿಮ್ (ವಿದ್ಯಾರ್ಥಿ) ಯನ್ನು ಹೊರತುಪಡಿಸಿ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹನ ಸಂದೇಶವಾಹಕರು
(ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: "ತಿಳಿದಿರಲಿ! ಖಂಡಿತವಾಗಿಯೂ ಈ ಪ್ರಪಂಚವು ಶಾಪಗ್ರಸ್ತವಾಗಿದೆ. ಅದರಲ್ಲಿರುವುದೂ ಶಾಪಗ್ರಸ್ತವಾಗಿದೆ. ಅಲ್ಲಾಹನ ಸ್ಮರಣೆ ಮತ್ತು ಅದಕ್ಕೆ ಸಂಬಂಧಿಸಿದವುಗಳು, ಆಲಿಮ್ (ವಿದ್ವಾಂಸ)
ಅಥವಾ ಮುತಅಲ್ಲಿಮ್ (ವಿದ್ಯಾರ್ಥಿ) ಯನ್ನು ಹೊರತುಪಡಿಸಿ". [حسن] [رواه الترمذي وابن ماجه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ತಿಳಿಸುವುದೇನೆಂದರೆ, ಈ ಪ್ರಪಂಚ ಮತ್ತು ಅದರಲ್ಲಿರುವುದು ಅಲ್ಲಾಹನಿಗೆ ಅಪ್ರಿಯವಾಗಿದೆ, ನಿಂದನೀಯವಾಗಿದೆ, ತೊರೆಯಲಾಗಿದೆ, ದೂರವಾಗಿದೆ. ಅದರಲ್ಲಿರುವುದೆಲ್ಲವೂ ತೊರೆಯಲಾಗಿದ್ದು, ಪ್ರಶಂಸಾರ್ಹವಲ್ಲ. ಏಕೆಂದರೆ ಅದು ಮತ್ತು ಅದರಲ್ಲಿರುವ ಎಲ್ಲವೂ ಅಲ್ಲಾಹನಿಂದ ವಿಮುಖಗೊಳಿಸುತ್ತವೆ ಮತ್ತು ಅವನಿಂದ ದೂರ ಮಾಡುತ್ತವೆ. ಆದರೆ, ಅಲ್ಲಾಹನ ಸ್ಮರಣೆ ಮತ್ತು ಅದಕ್ಕೆ ಹತ್ತಿರವಿರುವ ಮತ್ತು ಅದನ್ನು ಹೋಲುವ, ಅಲ್ಲಾಹು ಪ್ರೀತಿಸುವ ವಿಷಯಗಳು, ಅಥವಾ ಧಾರ್ಮಿಕ ಜ್ಞಾನವುಳ್ಳ, ಅದನ್ನು ಜನರಿಗೆ ಕಲಿಸುವ ವಿದ್ವಾಂಸ, ಅಥವಾ ಅದನ್ನು ಕಲಿಯುವ ವಿದ್ಯಾರ್ಥಿಯನ್ನು ಹೊರತುಪಡಿಸಿ.

http://www.sunnah.global/hadeeth/kn/show/3788